**ಓಎಸ್ ಸಂಖ್ಯೆಃ 59/2021 ಪಿಡಬ್ಲ್ಯೂಃ1**

**ದಿನಾಂಕಃ 22-09-2025 ರಂದು ಸಾಕ್ಷಿದಾರರನ್ನು ಕರೆಯಿಸಿ ಪ್ರಮಾಣಿಕರಿಸಲಾಯಿತು.**

**ಪಾಟೀ ಸವಾಲುಃ 1 ಮತ್ತು 3 ನೇ ಪ್ರತಿವಾದಿಗಳ ಪರ ವಕೀಲರಿಂದ**

1. ನನ್ನ ಅಜ್ಜ ಹೇಮಪ್ಪ ಎಂದರೆ ನಿಜ. ನನ್ನ ತಂದೆ ವೀರಪ್ಪ ತಾಯಿ ಚಂದ್ರಮ್ಮ ಎಂದರೆ ನಿಜ. ನನ್ನ ತಾಯಿ ತೀರಿಕೊಂಡ 6 ವರ್ಷಗಳ ನಂತರ ನನ್ನ ತಂದೆ ತೀರಿಕೊಂಡಿರುತ್ತಾನೆ. 3 ಮನೆ ಇದ್ದು ಪ್ರತಿವಾದಿ 3 ಈತನು ವಾಸವಿದ್ದ ಮನೆಯಲ್ಲಿ ನನ್ನ ತಂದೆ ತೀರಿಕೊಂಡಿರುತ್ತಾರೆ. ನನ್ನ ತಂದೆ ದಿನಾಂಕ 03-02-2020 ರಂದು ತೀರಿಕೊಂಡಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ನನ್ನ ತಾಯಿ ದಿನಾಂಕ 22-02-2007 ರಂದು ತೀರಿಕೊಂಡಿರುತ್ತಾರೆ ಎಂದರೆ ನನಗೆ ಮಾಹಿತಿ ಇಲ್ಲ. ನನ್ನ ತಂದೆ ತನ್ನ 97 ನೇ ವಯಸ್ಸಿನಲ್ಲಿ ತೀರಿಕೊಂಡಿರುತ್ತಾರೆ. ನನ್ನ ತಂದೆ ಸುತ್ತ 10 – 15 ಹಳ್ಳಿಗಳಿಗೆ ಹೆಸರುವಾಸಿಯಾಗಿದ್ದು ಆತ ಜನರ ಸಮಸ್ಯೆಗಳನ್ನು ಬಗೆಹರಿಸುತ್ತಿದ್ದ ಎಂದರೆ ನನಗೆ ಗೊತ್ತಿಲ್ಲ ಕಾರಣ ನಾನು ಬೆಂಗಳೂರಿನಲ್ಲಿ ವಾಸವಿದ್ದೆ ಎಂದು ಹೇಳುತ್ತಾರೆ.

2. ನಾನು ಬೆಂಗಳೂರಿನಲ್ಲಿ 15 ವರ್ಷಗಳು ಅಲ್ಲಿ ವಾಸವಾಗಿದ್ದೆ. ನಾನು 10 ವರ್ಷದ ಪ್ರಾಯದಲ್ಲಿದ್ದಾಗ ಬೆಂಗಳೂರಿಗೆ ಹೋಗಿರುತ್ತೇನೆ. ನಾನು 22 ವಯಸ್ಸು ಆದಾಗ ಹಲಗೇರಿಗೆ ಹೆಂಡತಿ ಜೊತೆ ಬಂದಿರುತ್ತೇನೆ. ನನ್ನ ತಂದೆ 1974 – 75 ರಲ್ಲಿ ಎಪಿಎಂಸಿ ಚುನಾವಣೆಯಲ್ಲಿ ಹಲಗೇರಿ ಭಾಗಕ್ಕೆ ಅವಿರೋಧವಾಗಿ ಆಯ್ಕೆಯಾಗಿದ್ದರು ಎಂದರೆ ನನಗೆ ಗೊತ್ತಿಲ್ಲ. ನಾನು ಆ ಸಮಯದಲ್ಲಿ ಹಲಗೇರಿ ಗ್ರಾಮದಲ್ಲಿದ್ದು ನನಗೆ ನನ್ನ ತಂದೆ ಚುನಾಯಿತನಾದ ವಿಷಯ ಗೊತ್ತಿತ್ತು ಎಂದರೆ ಸರಿ ಅಲ್ಲ. ನನ್ನ ತಂದೆ ಪಿಎಲ್‌ಡಿ ಬ್ಯಾಂಕಿಗೆ ಅಧ್ಯಕ್ಷರಾಗಿದ್ದರು ಎಂದರೆ ನನಗೆ ಗೊತ್ತಿಲ್ಲ.

3. ನನ್ನ ಅಜ್ಜನ ಕಾಲದಿಂದ ಮನೆಗಳು ಮತ್ತು ಜಮೀನುಗಳು ಬಂದಿರುತ್ತವೆ ಎಂದು ಹೇಳುತ್ತಾರೆ. ನಮ್ಮ ಗರಾಣೆಗೆ ಒಟ್ಟು 8 ಎಕರೆ 10 ಗುಂಟೆ ಜಮೀನು ಆಲದಕಟ್ಟಿ ಗ್ರಾಮದಲ್ಲಿ ಸದ್ರಿ ಜಮೀನು ಇದ್ದು 3 ಮನೆಗಳು ಇವೆ. ಹಲಗೇರಿ ಗ್ರಾಮದ ಬಸ್ ನಿಲ್ದಾಣದ ಹತ್ತಿರ 6 ಮಳಿಗೆಗಳು ಇವೆ. ನನ್ನ ತಾಯಿಯ ತವರು ಮನೆ ದಾವಣಗೆರೆ ಜಿಲ್ಲೆಯ ಜಗಳೂರು ತಾಲೂಕಿನ ಬಿಳಿಚೋಡ ಗ್ರಾಮ. ಅಲ್ಲಿ ನನ್ನ ತಾಯಿಗೆ ಸಂಬಂಧಿಸಿದ ಹೊಲ ಮತ್ತು ಮನೆಗಳು ಇವೆ ಎಂದರೆ ನನಗೆ ಗೊತ್ತಿಲ್ಲ. ನನ್ನ ತಾಯಿಯ ತವರು ಮನೆ

ಬಿಳಿಚೊಡ ಎಂದು ಗೊತ್ತು. ಅಲ್ಲಿ ಎರಡೂವರೆ ಎಕರೆ ಜಮೀನು ಒಂದು ಮನೆ ನನ್ನ ತಾಯಿಯ ಪಾಲಿಗೆ ಬಂದಿತ್ತು ಎಂದರೆ ನನಗೆ ಗೊತ್ತಿಲ್ಲ.

4. ಸದ್ರಿ ನಾವು 4 ಜನ ಅಣ್ಣತಮ್ಮಂದಿರು 3 ಜನ ಅಕ್ಕ ತಂಗಿಯರು ಇರುತ್ತಾರೆ. ಸದ್ರಿ ನನ್ನ ತಾಯಿ ತಲಾ 25 ಗುಂಟೆಯಂತೆ 4 ಜನ ಗಂಡು ಮಕ್ಕಳಿಗೆ ಜಮೀನು ಮಾಡಿರುತ್ತಾಳೆ ಎಂದರೆ ನನಗೆ ಗೊತ್ತಿಲ್ಲ. ಈಗ ನನಗೆ ತೋರಿಸಲಾದ ಪಹಣಿ ಪತ್ರಿಕೆ ಅದರಲ್ಲಿ 25 ಗುಂಟೆಗೆ ನನ್ನ ಹೆಸರು ದಾಖಲಿದ್ದು ಆ ದಾಖಲೆಯನ್ನು ಸಾಕ್ಷಿ ನೋಡಿ ಗುರುತಿಸಿದ್ದರಿಂದ ಅದನ್ನು ಅಭಿಮುಖವಾಗಿ ನಿಡಿ-1 ಎಂದು ಗುರುತಿಸಲಾಯಿತು.

5. ಶಿವಯೋಗಪ್ಪ ಈತನ ಹೆಸರಿನಲ್ಲಿ 25 ಗುಂಟೆ ಜಮೀನು ಆಗಿದೆ ಎಂದು ದಾಖಲೆಯನ್ನು ತೋರಿಸಲಾಗಿ ಸಾಕ್ಷಿ ಅದನ್ನು ನೋಡಿ ಗುರುತಿಸಲಾಗಿ ಅದನ್ನು ಅಭಿಮುಖವಾಗಿ ನಿಡಿ-2 ಎಂದು ಗುರುತಿಸಲಾಯಿತು. ಬಸವರಾಜ ಈತನ ಹೆಸರಿನಲ್ಲಿರುವ ದಾಖಲೆಯನ್ನು ನೋಡಿ ಗುರುತಿಸಿದ್ದು ಅದನ್ನು ಅಭಿಮುಖವಾಗಿ ನಿಡಿ-3 ಎಂದು ಗುರುತಿಸಲಾಯಿತು. ರುದ್ರೇಶ ಈತನ ಹೆಸರಿನಲ್ಲಿರುವ ದಾಖಲೆಯನ್ನು ನೋಡಿ ಗುರುತಿಸಿದ್ದು ಅದನ್ನು ಅಭಿಮುಖವಾಗಿ ನಿಡಿ-4 ಎಂದು ಗುರುತಿಸಲಾಯಿತು.

6. ನನ್ನ ಪ್ರಕಾರ ದಾವಾ ಆಸ್ತಿಗಳಲ್ಲಿ 4 ಹಿಸ್ಸೆ ಆಗಬೇಕು ನನ್ನ 3 ಜನ ಅಕ್ಕ ತಂಗಿಯರಿಗೆ ಕೊಡುವುದನ್ನು ಕೊಟ್ಟು ಮದುವೆ ಮಾಡಿದ್ದರಿಂದ ಅವರಿಗೆ ಆಸ್ತಿ ಇಲ್ಲ ಎಂದು ಹೇಳುತ್ತಾರೆ. ಅವರಿಗೆ ಕೊಡಬೇಕಾದ ಎಲ್ಲ ಹಿಸ್ಸೆಯನ್ನು ಕೊಡಲಾಗಿದೆ ಎಂದು ಹೇಳುತ್ತಾರೆ. ಪ್ರತಿವಾದಿ ನಂಬ್ರ 12 ಮತ್ತು 13 ಇವರು ನನ್ನ ತಂದೆಯ ಅಣ್ಣನ ಮಕ್ಕಳು ಎಂದರೆ ನಿಜ. ಸದ್ರಿ ಮೊದಲು ದಾವೆ ಸಲ್ಲಿಸಿದಾಗ ಬಾಡಿಗೆದಾರ ಮತ್ತು ಉಳಿದ 5 ಜನರ ವಿರುದ್ಧ ಮಾತ್ರ ದಾವೆ ಸಲ್ಲಿಸಿದ್ದು ನಂತರದಲ್ಲಿ ಅವರನ್ನೆಲ್ಲ ಸೇರಿಸಲಾಗಿದೆ ಎಂದರೆ ನಿಜ. ಮೊದಲಿಗೆ ನನ್ನ ಸಹೋದರಿಯರನ್ನು ದಾವೆಗೆ ಸೇರಿಸಿರಲಿಲ್ಲ ಕಾರಣ ಅವರಿಗೆ ಬೆಳ್ಳಿ ಬಂಗಾರ ಕೊಟ್ಟು ಅವರ ಆಸ್ತಿಯನ್ನು ಕೊಡಲಾಗಿತ್ತು ಎಂದು ಹೇಳುತ್ತಾರೆ.

7. ನಂಜುಂಡಪ್ಪ ಪುಟ್ಟಪ್ಪ ಪಟ್ಟಣಶೆಟ್ಟಿ ಇವರು ಗೊತ್ತು ಆದರೆ ತೀರಿಕೊಂಡಿರುತ್ತಾರೆ. ಬಿ. ಎಸ್. ನಾಗರಜ್ಜಿ ಎಂಬುವವರ ಬಗ್ಗೆ ನನಗೆ ಗೊತ್ತಿಲ್ಲ. ಪಿ. ಆರ್. ಉಜ್ಜನಗೌಡ ಇವರ ಬಗ್ಗೆ ನನಗೆ ಗೊತ್ತಿಲ್ಲ. ವಾದಿಯರು ಮತ್ತು ಪ್ರತಿವಾದಿಯರು ಕೂಡಿ ಇದ್ದಾಗ ಕುಟುಂಬ ವ್ಯವಸ್ಥಾಪನ ದಾಖಲೆಯನ್ನು 2007 ರಲ್ಲಿ ಮಾಡಿಕೊಂಡಿರುತ್ತೇವೆ ಎಂದರೆ ಮಾಡಿರಬಹುದು. ಸದ್ರಿ ಪಾಲು ವಿಭಾಗ ಪತ್ರವನ್ನು 2007

ರಲ್ಲಿ ನನ್ನ ತಾಯಿ ತೀರಿಕೊಳ್ಳುವ 3 ತಿಂಗಳ ಪೂರ್ವದಲ್ಲಿ 3 ಹಿಸ್ಸೆಗಳನ್ನಾಗಿ ವಿಂಗಡಿಸಲಾಗಿತ್ತು. ಅದರಲ್ಲಿ ಒಂದು ಹಿಸ್ಸೆ ನನ್ನ ಸಹೋದರರಿಗೆ, 2 ನೇ ಹಿಸ್ಸೆ ನಂಜುಂಡಪ್ಪನ ಮಕ್ಕಳಾದ ಸಿದ್ದೇಶ ಹಾಗೂ ರಾಜಶೇಖರ ಇವರಿಗೆ, 3 ನೇ ಹಿಸ್ಸೆ ನನ್ನ ತಂದೆ ಬೆಲ್ಲದ ಇವರಿಗೆ ಮಾಡಲಾಗಿತ್ತು ಎಂದರೆ ನಿಜ. ಸದ್ರಿ ಅಫಸಾತ್ ವಾಟ್ನಿ ಪ್ರಕಾರ ಸರ್ವೆ ನಂಬ್ರ 111/1 ಅ+2 ಅ ಆಲದಕಟ್ಟಿ ಗ್ರಾಮದ 8 ಎಕರೆ 12 ಗುಂಟೆ ಅದರ ಪೈಕಿ 1 ನೇ ಹಿಸ್ಸೆದಾರರಾದ ಜಯರುದ್ರಪ್ಪನಿಗೆ ಉತ್ತರದ ಭಾಗಕ್ಕೆ 2 ಎಕರೆ 2 ಗುಂಟೆ ಜಮೀನು ಕೊಡಲಾಗಿದೆ ಎಂದರೆ ನನಗೆ ಗೊತ್ತಿಲ್ಲ. ಸದ್ರಿ ಅದೇ 111/1 ಅ ಅದರಲ್ಲಿ ಉತ್ತರದಿಂದ 3 ನೇ ಹಿಸ್ಸೆ 2 ಎಕರೆ 2 ಗುಂಟೆ ಜಮೀನು ನನಗೆ ಬಂದಿದೆ ಎಂದೆ ನಿಜ. ರುದ್ರೇಶ ಈತನಿಗೆ ದಕ್ಷಿಣ ಭಾಗದ 2 ಎಕರೆ 3 ಗುಂಟೆ ಜಮೀನು ಹೋಗಿದೆ ಎಂದರೆ ನನಗೆ ಗೊತ್ತಿಲ್ಲ. ಅದೇ ರೀತಿ ಪ್ರತಿವಾದಿ 12 ಮತ್ತು 13 ಇವರಿಗೆ 2 ಎಕರೆ 2 ಗುಂಟೆ ಕೊಡಲಾಗಿದೆ ಎಂದರೆ ಅವರಿಗೆ ಏನು ಕೊಡುವುದು ಇದೆ ಮೊದಲೇ ಕೊಟ್ಟಿರುತ್ತಾರೆ ಎಂದು ಹೇಳುತ್ತಾರೆ. ಅದನ್ನು ಪಾಲು ವಿಭಾಗ ಮಾಡುವ ಸಮಯದಲ್ಲಿ ಕೊಟ್ಟಿರುತ್ತಾರೆ ಎಂದು ಹೇಳುತ್ತಾರೆ.

ಈ ಹಂತದಲ್ಲಿ ಮುಂದುವರಿದ ಪಾಟೀ ಸವಾಲಿಗೆ ಕಾಲಾವಕಾಶ ಕೋರಿದ್ದು ಕೋರಿಕೆ ಮೇರೆಗೆ ಮುಂದೂಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸರಿ ಇದೆ.

**ಪ್ರಭಾರ 3 ನೇ ಹೆಚ್ಚುವರಿ ಹಿರಿಯ ದಿವಾಣಿ ನ್ಯಾಯಾಧೀಶರು,**
**ಮತ್ತು ಜೆಎಂಎಫ್‌ಸಿ, ರಾಣೇಬೆನ್ನೂರು.**